## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

28

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 7/4/21

# ಸಾಹಿತಿ ಮುಮ್ತಾಜ್ ಬೇಗಂ ನಿಧನ

ಮೂಲ್ಕಿ: ಹಿರಿಯ ಸಾಹಿತಿ ಮುಮ್ತಾಜ್ ಬೇಗಂ (73) ಮಂಗಳವಾರ ನಿಧನರಾದರು. ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಕತಾರ್‌ನಲ್ಲಿ ಯುನೆಸ್ಕೋ ಆರ್ಥಿಕ ಮತ್ತು ಆಡಳಿತ ಸಹಾಯಕರಾಗಿ, ಗ್ರಿಂಡ್ಲೇಸ್ ಬ್ಯಾಂಕ್‌ನಲ್ಲಿ ಗುಮಾಸ್ತೆ, ಪ್ಯೂಜಿ ಗಾರ್ಮೆಂಟ್‌ನಲ್ಲಿ ಕಾರ್ಯದರ್ಶಿಯಾಗಿದ್ದರು.



ಭಾರತಕ್ಕೆ ಹಿಂದಿರುಗಿ ಬ್ರಹ್ಮಾವರ ಕೆಮಿಕಲ್ಸ್‌ನಲ್ಲಿ ಪ್ರಬಂಧಕಿ, ಉಡುಪಿ ಜಿಲ್ಲಾ ಗ್ರಾಹಕರ ಪರಿಹಾರ ವೇದಿಕೆಯಲ್ಲಿ 5 ವರ್ಷ ವಕೀಲರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕರಾವಳಿ ಲೇಖಕಿ ವಾಚಕಿಯರ ಸಂಘದ ಸದಸ್ಯೆಯಾಗಿದ್ದರು. ಹಲವು ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಗುರುತಿಸಿಕೊಂಡಿದ್ದರು. ಅವ್ಯಕ್ತ (ಕಥಾ ಸಂಕಲನ), ಸರ್ವಋತುಗಳು ನಿನಗಾಗಿ, ಪರದೇಶ, ವರ್ತುಲ, ಬಂದಳಿಕೆ, ಚಿಂಪಿ (ಶಿಶು ಸಾಹಿತ್ಯ) ಸಹಿತ 300ಕ್ಕೂ ಹೆಚ್ಚು ಸಣ್ಣ ಕತೆಗಳನ್ನು ಬರೆದಿದ್ದಾರೆ.